# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 274 (306) |
| ಸದಸ್ಯರ ಹೆಸರು | ಅ ದೇವೇಗೌಡ |
| ಉತ್ತರಿಸುವ ದಿನಾಂಕ | 23.09.2020 |
| ಉತ್ತರಿಸುವವರು | ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ | ಮಾಗಡಿ ಟೌನ್‌ನಲ್ಲಿ ಕೆಂಪೇಗೌಡರ ಕಾಲದಲ್ಲಿ ನಿರ್ಮಾಣವಾಗಿರುವ ಕೋಟೆಯ ಒಟ್ಟು ಆಸ್ತಿ (ಜಾಗ) ಎಷ್ಟಿದೆ; | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಮಾಗಡಿಟೌನ್ನಲ್ಲಿ ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ನಿರ್ಮಾಣವಾಗಿರುವ ಕೋಟೆಯು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ.<br>ಆದಾಗ್ಯೂ ಸದರಿ ಕೋಟೆಯು ಮಾಗಡಿ ಟೌನ್‌ನ ಸ.ನಂ208/1, 2015, 202, ಮತ್ತು 201/1ರ ಒಟ್ಟು ವಿಸ್ತೀರ್ಣ 6-24ಎ.ಗುಂ, ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದು ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆಯವರು ಮಾಹಿತಿ ಸಲ್ಲಿಸಿರುತ್ತಾರೆ. |
| ಆ | ನಾಡಪ್ರಭು ಕೆಂಪೇಗೌಡರ ಅವಧಿಯಲ್ಲಿ ಮಾಗಡಿಯಲ್ಲಿ ನಿರ್ಮಿಸಲಾಗಿರುವ ಪಂಚಲಿಂಗೇಶ್ವರ ದೇವಸ್ಥಾನಗಳಾದ ಗೌರಮ್ಮ ಕೆರೆಯ ಹತ್ತಿರದ ಪ್ರಸನ್ನ ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನ, ಕೋಟೆ ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನ. ಶ್ರೀ ಕಾಶಿ ವಿಶ್ವನಾಥಸ್ವಾಮಿ ದೇವಸ್ಥಾನ, ಶ್ರೀ ಗವಿ ಗಂಗಾಧರೇಶ್ವರಸ್ವಾಮಿ ದೇವಸ್ಥಾನ ಮತ್ತು ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನದ ಒಟ್ಟು ಆಸ್ತಿಗಳು (ಜಾಗ) ಎಷ್ಟಿವೆ. | ಮಾಗಡಿ ತಾಲ್ಲೂಕಿಗೆ ಸಂಬಂಧಿಸಿದಂತೆ, ಪ್ರಸ್ತಾಪಿತ ದೇವಾಲಯಗಳು ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳಾಗಿರುತ್ತವೆ. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಧಾರ್ಮಿಕ ಸಂಸ್ಥೆಗಳು ವಾಸ್ತವಿಕವಾಗಿ ಆಸ್ತಿ ಹೊಂದಿರುವ, ಒತ್ತುವರಿಯಾಗಿರುವ, ಪರಭಾರೆ ಮಾಡಿರುವ ಬಗ್ಗೆ ಆಸ್ತಿ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತಿದೆ. ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಚಾಲ್ತಿ ಸಾಲಿನ ಪಹಣಿಗಳಲ್ಲಿ ಗುರುತಿಸಿರುವಂತೆ ತಹಲ್‌ವರೆವಿಗೂ ದೇವಾಲಯಗಳ ಹೆಸರಿನಲ್ಲಿ ಪಹಣಿಗಳು ಬರುತ್ತಿರುವ ಶ್ರೀ ರಂಗನಾಥಸ್ವಾಮಿ, ತಿರುಮಲೆ ಮಾಗಡಿ ಟೌನ್, ಶ್ರೀ ಸೋಮೇಶ್ವರ ಸ್ವಾಮಿ ಮಾಗಡಿ ಟೌನ್ ಹಾಗೂ ಶ್ರೀ ರಾಮೇಶ್ವರಸ್ವಾಮಿ ಮಾಗಡಿ ಟೌನ್ ದೇವಾಲಯಗಳಿಗೆ ಸಂಬಂಧಿಸಿದಂತೆ ಪಹಣಿಗಳಲ್ಲಿ ಆಸ್ತಿ ಕಂಡು ಬರುತ್ತಿದ್ದು, ಸದರಿ ಆಸ್ತಿಗಳು ಎಲ್.ಆರ್.ಎಫ್. ಮೂಲಕ ರೈತರುಗಳಿಗೆ ಮಂಜೂರಾಗಿರುತ್ತದೆಯೇ ಯಾವುದಾದರೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುತ್ತದೆಯೇ ಎಂಬ ಬಗ್ಗೆ ದಾಖಲೆ ಕ್ರೋಢೀಕರಣ ಕಾರ್ಯಪ್ರಗತಿಯಲ್ಲಿದ್ದು, ದಾಖಲೆ ಕ್ರೋಢೀಕರಣದ ನಂತರ ದೇವಾಲಯದ ಆಸ್ತಿಯಾಗಿದ್ದಲ್ಲಿ ಸರ್ವೇಕಾರ್ಯ ನಡೆಸಿ, ಒತ್ತುವರಿಯಾಗಿದ್ದಲ್ಲಿ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ.<br>ಮುಂದುವರೆದು ಸದ್ಯ ದೇವಾಲಯಗಳು ಇರುವ ಜಾಗ ಈ ಕೆಳಕಂಡಂತೆ ಇರುತ್ತದೆ. |

| ಕ್ರ ಸಂ | ದೇವಾಲಯದ ಹೆಸರು | ಆಸ್ತಿಯ ವಿವರ |
|---|---|---|
| 1. | ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನವು ವಡ್ಡರಪಾಳ್ಯ | ಸ.ನಂ:4ರಲ್ಲಿ ಒಟ್ಟು 3-00 ಎಕರೆ ವಿಸ್ತೀರ್ಣ |
| 2. | ಶ್ರೀ ಕೋಟೆರಾಮೇಶ್ವರಸ್ವಾಮಿ ದೇವಾಲಯವು ಮಾಗಡಿ | ಸ.ನಂ:203ರ 0-19ಗುಂಟೆ ವಿಸ್ತೀರ್ಣ |
| 3. | ಶ್ರೀ ಕಾಶಿ ವಿಶ್ವೇಶ್ವರ ದೇವಸ್ಥಾನವು ಪುರಸಭಾ | ಖಾತಾ ನಂ:11/927ರಲ್ಲಿ ಒಟ್ಟು ವಿಸ್ತೀರ್ಣ=43*88 ಅಡಿಗಳಲ್ಲಿ |
| 4. | ಶ್ರೀ ಪ್ರಸನ್ನ ರಾಮೇಶ್ವರಸ್ವಾಮಿ ದೇವಸ್ಥಾನ, ಮಾಗಡಿ | ಸ.ನಂ:82/1 ರ 1-22ಎ. ಗುಂಟೆ ವಿಸ್ತೀರ್ಣ |

| | | |
|---|---|---|
| | | 5 ಶ್ರೀ ಗವಿಗಂಗಾಧರಸ್ವಾಮಿ ದೇವಾಲಯದ ಆಸ್ತಿಯು ಎಲ್.ಆರ್.ಎಫ್. ಮೂಲಕ ಮಂಜೂರಾಗಿದ್ದು ತಸ್ತಿಕ್ ಹಣ ಸಹ ನಿಗದಿಯಾಗಿರುತ್ತದೆ. ಉಳಿದಂತೆ ದೇವಾಲಯವಿರುವ ಜಾಗವು ಸರ್ವೆ ನಂಬರಿಗೆ ಬರುತ್ತದೆಯೇ ಅಥವಾ ಗ್ರಾಮ ಠಾಣಕ್ಕೆ ಬರುತ್ತದೆಯೇ ಎಂಬ ಬಗ್ಗೆ ಪರಿಶೀಲನಾ ಹಂತದಲ್ಲಿರುತ್ತದೆ. |
| ಇ | ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮಾಗಡಿಟೌನ್ ತಿರುಮಲೆಯಲ್ಲಿ ನಿರ್ಮಿಸಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಒಟ್ಟು ಆಸ್ತಿ (ಜಾಗ) ಎಷ್ಟಿದೆ ದೇವಸ್ಥಾನದ ಆಸ್ತಿ ಒತ್ತುವರಿಯಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮಾಗಡಿಟೌನ್ ತಿರುಮಲೆಯಲ್ಲಿ ನಿರ್ಮಿಸಿರುವ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನವಿರುವ ಜಾಗವು ಪುರಸಭಾ ವ್ಯಾಪ್ತಿಗೊಳಪಟ್ಟಿದ್ದು, ಪುರಸಭಾ ಖಾತ ನಂ:3580/4038ರಲ್ಲಿ ಈ ಕೆಳಕಂಡಂತೆ ಆಸ್ತಿಗಳು ಇರುತ್ತವೆ. (ಅಡಿಗಳಲ್ಲಿ)<br>1) 39'* 90' 28'* 17<br>2) $\frac{163'*90' +135}{2}$<br>3) $\frac{135'*12'+12'}{2}$<br>4) $\frac{179'+168'}{2} * \frac{189'+173'}{2}$<br>(ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ ಕಲ್ಲಿನ ಕಟ್ಟಡ, ಟಾರಸಿ ಗೋಪುರಗಳ ದ್ವಾರಗಳು)<br>ಅಧಿಸೂಚಿತ ಧಾರ್ಮಿಕ ಸಂಸ್ಥೆಗಳು ವಾಸ್ತವಿಕವಾಗಿ ಆಸ್ತಿ ಹೊಂದಿರುವ, ಒತ್ತುವರಿಯಾಗಿರುವ, ಪರಭಾರೆ ಮಾಡಿರುವ ಬಗ್ಗೆ ಆಸ್ತಿ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತಿದ್ದು, ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ದೇವಾಲಯದ ಜಾಗದ ದಾಖಲೆ ಕ್ರೋಢೀಕರಣ ನಡೆಯುತ್ತಿದ್ದು, ಅದರಂತೆ ಪ್ರಸ್ತಾಪಿತ ದೇವಾಲಯದ ಜಾಗವು ಒತ್ತುವರಿಯಾಗಿದ್ದಲ್ಲಿ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತದೆ. |
| ಈ | ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮಾಗಡಿಟೌನ್ ತಿರುಮಲೆಯಲ್ಲಿ ನಿರ್ಮಿಸಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಒಟ್ಟು ಆಸ್ತಿ ಎಷ್ಟಿದೆ (ಜಾಗ) ದೇವಸ್ಥಾನದ ಒತ್ತುವರಿಯಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ತಿರುಮಲೆ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯವು ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ದೇವಾಲಯವಾಗಿರುವುದಿಲ್ಲ.<br>ಆದಾಗ್ಯೂ ಕ್ರ.ಸಂ.(ಆ)ನಲ್ಲಿ ವಿವರಿಸಿರುವಂತೆ ದೇವಾಲಯಗಳ ವಾಸ್ತವಿಕ ಆಸ್ತಿ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದ್ದು, ಸಮೀಕ್ಷೆ ನಂತರ ಪ್ರಸ್ತಾಪಿತ ದೇವಾಲಯದ ಜಾಗವು ಧಾರ್ಮಿಕ ದತ್ತಿ ಇಲಾಖೆ ಸ್ಥಳದ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಸೇರಿದ ಆಸ್ತಿಯಾಗಿದ್ದಲ್ಲಿ ಅದರಂತೆ ಪ್ರಸ್ತಾಪಿತ ದೇವಾಲಯದ ಜಾಗವು ಒತ್ತುವರಿಯಾಗಿದ್ದಲ್ಲಿ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತದೆ. |

(ಸಂಖ್ಯೆಕಂಇ 122 ಮುಸಪ್ರ 2020)

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.